# ಪತ್ರಿಕಾ ಪ್ರಕಟಣೆ

******

ತುಮಕೂರು ನಗರ ವ್ಯಾಪ್ತಿಯಲ್ಲಿ ಘನತ್ಯಾಜ್ಯ ನಿರ್ವಹಣೆ ಕುರಿತು ಜನರಲ್ಲಿ ಅರಿವು ಮೂಡಿಸಲು ತುಮಕೂರು ಸ್ಮಾರ್ಟ್ ಸಿಟಿ ಲಿ. ಮನೆಮನೆಪ್ರಚಾರ, ಬೀದಿನಾಟಕ, ಶಾಲಾಮಕ್ಕಳ ಜಾಥ, ಪ್ರಬಂಧ ಹಾಗೂ ಚರ್ಚಾಸ್ಪರ್ಧೆಯಂತಹ ಅನೇಕ ಕಾರ್ಯಕ್ರಮಗಳನ್ನು ಆಯೋಜಿಸಿದೆ. ಈ ಕಾರ್ಯಕ್ರಮಗಳನ್ನು ಪರಿಣಾಮಕಾರಿಯಾಗಿ ಜನರಿಗೆ ಮುಟ್ಟಿಸಲು ಮಹಾನಗರ ಪಾಲಿಕೆಯ ಸಹಕಾರದೊಂದಿಗೆ ಭಗೀರಥ ಸಂಸ್ಥೆಯು ಯಶಸ್ವಿಯಾಗಿ ಅನುಷ್ಠಾನಗೊಳಿಸಿತ್ತಿದೆ.

ಇದರ ಅಂಗವಾಗಿ ದಿ. 2/8/2019 ರಂದು ಹನುಮಂತಪುರ ಸರ್ಕಾರಿ ಪ್ರೌಢಶಾಲೆ ಮಕ್ಕಳಿಗೆ ಪ್ರಬಂಧ ಸ್ಪರ್ಧೆಯನ್ನು ಏರ್ಪಡಿಸಲಾಗಿತ್ತು. ಈ ಕಾರ್ಯಕ್ರಮಕ್ಕೆ ಮುಖ್ಯ ಅಥಿತಿಳಾಗಿ ಭಾಗವಹಿಸಿದ್ದ ಸ್ಮಾರ್ಟ್ ಸಿಟಿ ಲಿ.ನ ಪಿ.ಎಂ.ಸಿ.ವ್ಯವಸ್ಥಾಪಕರಾದ ವಿ.ಪುರುಷೋತ್ತಮ್ ಮಾತನಾಡಿ 'ಒಣಕಸ ಮತ್ತು ಹಸಿಕಸವನ್ನು ಮನೆಯಲ್ಲಿಯೇ ಪ್ರತ್ಯೇಕಗೊಳಿಸಿ ಪಾಲಿಕೆಯ ಗಾಡಿಗೆ ಕೊಡಬೇಕು. ಪ್ರತಿಯೊಬ್ಬರಲ್ಲಿಯೂ ಮನೆ ಮತ್ತು ಬೀದಿಗಳಲ್ಲಿ ಉತ್ಪತ್ತಿಯಾಗುವ ಕಸದ ನಿರ್ವಹಣೆಯ ಬಗ್ಗೆ ತಿಳುವಳಿಕೆ ಬರುವಂತೆ ಮಾಡಬೇಕು. ತುಮಕೂರು ನಗರವನ್ನು ಸ್ವಚ್ಛವಾಗಿಡಲು ನಮ್ಮೊಂದಿಗೆ ತಾವು ಕೂಡ ಕೈ ಜೋಡಿಸಬೇಕೆಂದು' ಹೇಳಿದರು.

ಸಾಹಿತಿ ಹಾಗೂ ಕಾರ್ಯಕ್ರಮ ಸಂಯೋಜಕರಾದ ಹಡವನಹಳ್ಳಿ ವೀರಣ್ಣಗೌಡ ಮಾತನಾಡುತ್ತ 'ತ್ಯಾಜ್ಯ ನಿರ್ವಹಣೆ ಇಂದು ಜಗತ್ತಿಗೆ ಸವಾಲಾಗಿ ಪರಿಣಮಿಸಿದೆ. ಪರಿಸರವನ್ನು ಸಂರಕ್ಷಿಸುವ ನಿಟ್ಟಿನಲ್ಲಿ ಪ್ರತಿಯೊಬ್ಬ ನಾಗರಿಕನೂ ಕಾಳಜಿವಹಿಸಬೇಕಾಗಿದೆ. ನಗರ ಮತ್ತು ಗ್ರಾಮೀಣ ಪ್ರದೇಶಗಳ ಭೇದವಿಲ್ಲದೆ

ಉತ್ಪತ್ತಿಯಾಗುತ್ತಿರುವ ಕಸವನ್ನು ವೈಜ್ಞಾನಿಕವಾಗಿ ನಿರ್ವಹಣೆ ಮಾಡಿ, ಈ ನೆಲವನ್ನು ಉಳಿಸುವುದರ ಜೊತೆಗೆ ನಾವು ಉಳಿಯಬೇಕಾಗಿದೆ. ಮನುಷ್ಯ ತನ್ನ ಅತಿಯಾದ ಬಯಕೆಗಳ ಪೂರೈಕೆಗಾಗಿ ಪರಿಸರದ ಮೇಲೆ ದಬ್ಬಾಳಿಕೆ ಮಾಡಿ, ಭವಿಷ್ಯದ ದಿನಗಳನ್ನು ಮಾರಕವಾಗಿ ಮಾಡಿಕೊಳ್ಳುತ್ತಿದ್ದಾನೆ. ನಾವು ನಿಂತಿರುವ ಈ ನೆಲವನ್ನು ಸ್ವಚ್ಛ ಮತ್ತು ಸುಂದರವಾಗಿಟ್ಟುಕೊಳ್ಳದಿದ್ದರೆ ಮುಂದಿನ ದಿನಗಳಲ್ಲಿ ಅಪಾರವಾದ ನೋವುಗಳಿಗೆ ತುತ್ತಾಗಬೇಕಾಗುತ್ತದೆ. ಹಾಗಾಗಿ ಪ್ರತಿಯೊಬ್ಬರು ತಮ್ಮ ಮನೆಗಳಲ್ಲಿ ಮತ್ತು ಬೀದಿಗಳಲ್ಲಿ ಸಂಗ್ರಹಿಸುವ ಕಸವನ್ನು ಸುಡದೆ ಸಮರ್ಪಕವಾಗಿ ಘನತ್ಯಾಜ್ಯ ನಿರ್ವಹಣೆ ಮಾಡಬೇಕು ಹಾಗೂ ಪ್ಲಾಸ್ಟಿಕ್ ಬಳಕೆಯನ್ನು ಸಂಪೂರ್ಣವಾಗಿ ತ್ಯಜಿಸಬೇಕು. ಈ ನಿಟ್ಟಿನಲ್ಲಿ ನಮ್ಮ ಪರಿಸರವನ್ನು ಸ್ವಚ್ಛವಾಗಿಡುವಲ್ಲಿ ದೊಡ್ಡವರ ಜೊತೆಗೆ ಮಕ್ಕಳು ಕೈಜೋಡಿಸಬೇಕು.' ಎಂದು ಕರೆ ನೀಡಿದರು.

ವಿಶ್ವವಾಣಿ ಪತ್ರಿಕೆಯ ಜಿಲ್ಲಾ ವರದಿಗಾರರಾದ ಶ್ರೀ ರಂಗನಾಥ ಕೆ.ಮರಡಿ ಯವರು ಮಾತನಾಡುತ್ತ 'ಈ ಹೊತ್ತಿನ ಸಮಕಷ್ಟಗಳಿಗೆ ನಮ್ಮ ಅಜ್ಞಾನವೇ ಕಾರಣ. ಇಂದು ಅನ್ನೈರ್ಮಲ್ಯದಿಂದ ಹಲವಾರು ರೋಗಗಳು ಬರುತ್ತಿವೆ. ನಾವು ತಿನ್ನುತ್ತಿರು ಆಹಾರ, ಕುಡಿಯುತ್ತಿರುವ ನೀರು ಕಲುಷಿತವಾಗಿವೆ. ಈ ಬಗ್ಗೆ ನಾವು ಜಾಗೃತರಾಗಬೇಕಾಗಿದೆ' ಎಂದು ತಿಳಿಸಿದರು.

ಅಧ್ಯಕ್ಷತೆ ವಹಿಸಿದ್ದ ಪ್ರೌಢಶಾಲೆಯ ಹಿರಿಯ ಶಿಕ್ಷಕರಾದ ಶ್ರೀಚನ್ನಬಸವಣ್ಣನವರು "ತುಮಕೂರು ಸ್ವಚ್ಛತೆಗೆ ಪಾಲಿಕೆ ಮತ್ತು ಸ್ಮಾರ್ಟ್ ಸಿಟಿ ಹಾಗೂ ಭಗೀರಥ ಮೈಸೂರು ಹಮ್ಮಿಕೊಂಡಿರುವ ಅರಿವಿನ ಕಾರ್ಯಕ್ರಮಗಳನ್ನು ಜನರುಸದುಪಯೋಗಪಡಿಸಿಕೊಳ್ಳಬೇಕೆಂದು" ಹೇಳಿದರು.

ಭಗೀರಥ ಸಂಸ್ಥೆಯ ಕಾಳಪ್ಪ ಮಕ್ಕಳಿಗೆ ಸ್ವಚ್ಛತೆ ಕಾಪಾಡುತ್ತೇವೆಂಬ ಪ್ರಮಾಣವಚನ ಬೋದಿಸಿದರು.

ತುಮಕೂರು ಸ್ಮಾರ್ಟ್ ಸಿಟಿ ಲಿಮಿಟೆಡ್ ನ ಸಂಪರ್ಕಾಧಿಕಾರಿ ಶ್ರೀವರಪ್ರಸಾದ್ ರಾವ್ ಪ್ರಬಂಧ ಸ್ಪರ್ಧೆಯಲ್ಲಿ ವಿಜೇತರಾದ ಮಕ್ಕಳಿಗೆ ಬಹುಮಾನ ವಿತರಣೆಮಾಡಿದರು.

ಕಾರ್ಯಕ್ರಮದಲ್ಲಿ ಪ್ರಾಥಮಿಕ ಶಾಲೆಯ ಮುಖ್ಯಶಿಕ್ಷಕರಾದ ಶ್ರೀಮತಿ ಅಮ್ಮಾಜಮ್ಮ, ಉಳಿದ ಎಲ್ಲಾ ಸಹಶಿಕ್ಷಕರು ಹಾಗೂ ಭಗೀರಥದ ಶ್ರೀ ಚೇತನ್ ಮೊದಲಾದವರು ಪಾಲ್ಗೊಂಡಿದ್ದರು.